ಶ್ರೀ ಎಂ. ಪಿ. ರೇಣುಕಾಚಾರ್ಯ (ಅಬಕಾರಿ ಸಚಿವರು):–

ಅ) ಬೆಂಗಳೂರು ನಗರ ಜಿಲ್ಲೆಯನ್ನು ಅಬಕಾರಿ ಆಡಳಿತ ದೃಷ್ಟಿಯಿಂದ 48 ವಲಯಗಳಾಗಿ ವಿಂಗಡಿಸಿದೆ. 2011–12ನೇ ಸಾಲಿಗೆ ಬೆಂಗಳೂರು ನಗರ ಜಿಲ್ಲೆಯಲ್ಲಿರುವ 837 ಮದ್ಯದಂಗಡಿ ಹಾಗೂ 1330 ಬಾರ್‌ಗಳ ವಲಯವಾರು ವಿವರಗಳನ್ನು **ಅನುಬಂಧ–'ಅ'** ನಂತೆ ಲಗತ್ತಿಸಿದೆ. ವಾರ್ಡ್‌ವಾರು ಸನ್ನದು ವಿವರಗಳನ್ನು ಇಲಾಖೆ ಕ್ರೋಢೀಕರಿಸಿರುವುದಿಲ್ಲ.

ಆ) ಇವುಗಳಲ್ಲಿ ಎಲ್ಲಾ ಮದ್ಯದಂಗಡಿ ಬಾರ್‌ಗಳು ಅಧಿಕೃತವಾಗಿರುತ್ತವೆ. ಯಾವುದೇ ಅನಧಿಕೃತ ಮದ್ಯದಂಗಡಿ/ಬಾರ್ ಕಾರ್ಯನಿರ್ವಹಿಸುತ್ತಿಲ್ಲ.

ಇ) ಇಲಾಖೆಯ ಗಮನಕ್ಕೆ ಬಂದಿರುತ್ತದೆ

ಈ) ಅಬಕಾರಿ ವರ್ಷ 2011–12 ರಲ್ಲಿ ಅಂದರೆ, ಜುಲೈ–2011 ರಿಂದ ಅಕ್ಟೋಬರ್ 2011 ರ ಅವಧಿಯಲ್ಲಿ ಸನ್ನದು ವ್ಯವಹಾರದಲ್ಲಿನ ವೇಳೆಯಲ್ಲಿನ ಅವಧಿಗಿಂತ ಮೊದಲು ಅಥವಾ ಅವಧಿಯನ್ನು ಮೀರಿ ತೆರೆದಿದ್ದ ಬಾರ್ ಮತ್ತು ಮದ್ಯದಂಗಡಿಗಳ ವಿರುದ್ಧ ಅಬಕಾರಿ ಕಾನೂನಿನನ್ವಯ, 182 ಮೊಕದ್ದಮೆಗಳನ್ನು ದಾಖಲು ಮಾಡಿಕೊಳ್ಳಲಾಗಿದೆ.

ಬೆಂಗಳೂರು ನಗರದಲ್ಲಿರುವ ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳಿಗೆ ನೀಡಿರುವ ಅನುದಾನ

116 (367) ಶ್ರೀ ನೆ. ಲ. ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್):– ಮಾನ್ಯ ಉನ್ನತ ಶಿಕ್ಷಣ, ಯೋಜನೆ, ಸಾಂಖ್ಯಿಕ, ಮುಜರಾಯಿ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬೆಂಗಳೂರು ನಗರದಲ್ಲಿರುವ ಮುಜರಾಯಿ ಇಲಾಖೆಗೆ ಸೇರಿದ ದೇವಾಲಯಗಳಿಗೆ ಕಳೆದ ಮೂರು ವರ್ಷಗಳಲ್ಲಿ ನೀಡಿರುವ ಅನುದಾನ ಎಷ್ಟು? (ವಿವರ ನೀಡುವುದು);

ಆ) 2011–12ನೇ ಸಾಲಿನಲ್ಲಿ ಸರ್ಕಾರವು ಮೀಸಲಿಟ್ಟಿರುವ ಅನುದಾನ ಎಷ್ಟು;

ಇ) ಈ ಸಾಲಿನಲ್ಲಿ ಈವರೆವಿಗೂ ವೆಚ್ಚ ಮಾಡಿರುವ ಹಣ ಎಷ್ಟು; ಉಳಿಕೆಯಿರುವ ಹಣ ಎಷ್ಟು? (ವಿವರ ನೀಡುವುದು);

ಈ) ಮುಜರಾಯಿ ಇಲಾಖೆಗೆ ಸೇರ್ಪಡೆಯಾಗದೇ ಇರುವ ದೇವಸ್ಥಾನಗಳಿಗೆ ಅವರಿಂದ ಪ್ರಸ್ತಾವನೆ ಬಂದ ಸಂದರ್ಭದಲ್ಲಿ ಸರ್ಕಾರವು ನೀಡುತ್ತಿರುವ ಸೌಲಭ್ಯ ಮತ್ತು ಅನುದಾನ ಎಷ್ಟು (ವಿವರ ನೀಡುವುದು)?

ಡಾ॥ ವಿ. ಎಸ್. ಆಚಾರ್ಯ (ಉನ್ನತ ಶಿಕ್ಷಣ, ಯೋಜನೆ, ಸಾಂಖ್ಯಿಕ, ಮುಜರಾಯಿ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):–

ಅ) ಒಟ್ಟು ರೂ. 374.00 ಲಕ್ಷಗಳು, (ಆ ಸಂಬಂಧದ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ)

ಆ) 2011–12ನೇ ಸಾಲಿನ ಆಯವ್ಯಯದಲ್ಲಿ ರೂ. 10100.00 ಲಕ್ಷಗಳನ್ನು ಒದಗಿಸಿದೆ.

ಇ) ಈವರೆವಿಗೆ ರೂ. 10018.36 ಲಕ್ಷಗಳ ಅನುದಾನವನ್ನು ದೇವಸ್ಥಾನಗಳು ಮತ್ತು ಧಾರ್ಮಿಕ ಸಂಸ್ಥೆಗಳ ಅಭಿವೃದ್ಧಿ ಕಾರ್ಯಕ್ಕೆ ಬಿಡುಗಡೆ ಮಾಡಿದೆ. (ಆ ಸಂಬಂಧದ ಜಿಲ್ಲಾವಾರು ವಿವರಗಳನ್ನು ಅನುಬಂಧ– II ರಲ್ಲಿ ನೀಡಲಾಗಿದೆ.)

ಇನ್ನೂ ರೂ. 81.64 ಲಕ್ಷಗಳು ಬಿಡುಗಡೆ ಬಾಕಿ ಉಳಿದಿರುತ್ತದೆ.

ಈ) ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 95 ಮುಅಬಿ 2010, ದಿನಾಂಕ 20–09–2010ರ ಅನ್ವಯ, ಖಾಸಗಿ ಧಾರ್ಮಿಕ ಸಂಸ್ಥೆಗಳ ದುರಸ್ಥಿ/ಜೀರ್ಣೋದ್ಧಾರ ಮುಂತಾದವುಗಳಿಗೆ ಅನುದಾನದ ಲಭ್ಯತೆಗೆ ಒಳಪಟ್ಟು ಗರಿಷ್ಠ ರೂ. 25.00 ಲಕ್ಷಗಳ ವರೆಗೆ ಅನುದಾನ ಬಿಡುಗಡೆ ಮಾಡಲು ಅವಕಾಶವಿದೆ.

ಅನುಬಂಧ–I

ಕಳೆದ 3 ವರ್ಷಗಳಲ್ಲಿ ಮುಜರಾಯಿ ಸಂಸ್ಥೆಗಳಿಗೆ ಬಿಡುಗಡೆ ಮಾಡಿದ ಅನುದಾನದ ವಿವರ

ಕ್ರ. ಸಂ.	*ದೇವಸ್ಥಾನಗಳ ಹೆಸರು*	*ಮಂಜೂರಾದ ಮೊತ್ತ ರೂ. ಲಕ್ಷಗಳಲ್ಲಿ*
	2008–09	
1	ಶ್ರೀ ಸಂಪಂಗಿರಾಮಸ್ವಾಮಿ ದೇವಸ್ಥಾನ, ಕಲ್ಯಾಣ ಮಂಟಪ ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು ಉತ್ತರ ತಾಲ್ಲೂಕು	1.20
2	ಶ್ರೀ ಕಾಶಿ ವಿಶ್ವೇಶ್ವರಸ್ವಾಮಿ ದೇವಸ್ಥಾನ, ಹನಿಯೂರು ಗ್ರಾಮ, ಹೆಸರಘಟ್ಟ ಹೋಬಳಿ, ಬೆಂಗಳೂರು ಉತ್ತರ (ಅ) ತಾಲ್ಲೂಕು	1.00
3	ಶ್ರೀ ಕೋಟೆ ವೆಂಕಟೇಶ್ವರಸ್ವಾಮಿ ಮತ್ತು ಶ್ರೀ ಕಾಶಿ ವಿಶ್ವೇಶ್ವರ ಸ್ವಾಮಿ ದೇವಸ್ಥಾನ, ಕೃಷ್ಣರಾಜಪುರ, ಬೆಂಗಳೂರು ಪೂರ್ವ ತಾಲ್ಲೂಕು	2.00

4	ಶ್ರೀ ದೊಡ್ಡ ಗಣಪತಿ ದೇವಸ್ಥಾನ, ಬಸವನಗುಡಿ, ಬೆಂಗಳೂರು ದಕ್ಷಿಣ ತಾಲ್ಲೂಕು	2.00
5	ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನ, ಬಸವನಗುಡಿ, ಬೆಂಗಳೂರು ದಕ್ಷಿಣ ತಾಲ್ಲೂಕು	2.00
6	ಹರಿಹರ ಗುಡ್ಡದ ಕುಮಾರಸ್ವಾಮಿ ದೇವಸ್ಥಾನ, ಬೆಂಗಳೂರು ದಕ್ಷಿಣ ತಾಲ್ಲೂಕು	2.00
7	ಶ್ರೀ ಚನ್ನರಾಯಸ್ವಾಮಿ ದೇವಸ್ಥಾನ, ಹುಸ್ಕೂರು ಗ್ರಾಮ, ಆನೇಕಲ್ (ತಾ)	1.00
8	ಶ್ರೀ ಆಂಜನೇಯಸ್ವಾಮಿ ದೇವಸ್ಥಾನ, ಇಂಡ್ಲವಾಡಿಪುರ, ಆನೇಕಲ್ ತಾಲ್ಲೂಕು	2.00
	2009–10	
9	ಶ್ರೀ ಚನ್ನರಾಯಸ್ವಾಮಿ ದೇವಸ್ಥಾನ, ಹುಸ್ಕೂರು ಗ್ರಾಮ, ಆನೇಕಲ್ ತಾಲ್ಲೂಕು	1.80
	2010–11	
10	ಶ್ರೀ ಸೋಮೇಶ್ವರಸ್ವಾಮಿ ದೇವಸ್ಥಾನ, ಹಲಸೂರು, ಬೆಂಗಳೂರು	100.00
11	ಶ್ರೀ ಪ್ರಸನ್ನ ಗಂಗಾಧರೇಶ್ವರಸ್ವಾಮಿ ದೇವಾಲಯ ಸಮುದಾಯ ಭವನಕ್ಕೆ ಹಲಸೂರು ಪೇಟೆ, ಬೆಂಗಳೂರು.	2.00
12	ಶ್ರೀ ಕಾಳಿಕಾ ಕಮಟೇಶ್ವರಿ ದೇವಾಲಯ, ನಗರ್ತರಪೇಟೆ, ಬೆಂಗಳೂರು	5.00
13	ಶ್ರೀ ಸಲ್ಲಪುರದಮ್ಮ ದೇವಿ ದೇವಸ್ಥಾನ, ಕಂಬೀಪುರ ಕುಂಬಳಗೂಡು, ಬೆಂಗಳೂರು ದ. ತಾಲ್ಲೂಕು	2.00
14	ಶ್ರೀ ಆಂಜನೇಯಸ್ವಾಮಿ ದೇವಾಲಯ, ಕಾಚನಾಯಕನಹಳ್ಳಿ, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು	2.00
15	ಶ್ರೀ ಸೋಮೇಶ್ವರಸ್ವಾಮಿ ದೇವಸ್ಥಾನ, ಸರ್ವಾಂಗಣ ಅಭಿವೃದ್ಧಿಗಾಗಿ ಹಲಸೂರು, ಬೆಂಗಳೂರು	200.00

16	ಶ್ರೀ ಸಂಪಂಗಿರಾಮಸ್ವಾಮಿ ದೇವಸ್ಥಾನ, ಕಲ್ಯಾಣ ಮಂಟಪ ದುರಸ್ಥಿಗಾಗಿ ಮುಜರಾಯಿ ಇಲಾಖೆ, ಬೆಂಗಳೂರು	8.00
17	ಶ್ರೀ ವಸಂತ ವಲ್ಲಭರಾಯಸ್ವಾಮಿ ದೇವಾಲಯ, ವಸಂತಪುರ, ಬೆಂಗಳೂರು ದಕ್ಷಿಣ ತಾಲ್ಲೂಕು	10.00
18	ಶ್ರೀ ಚನ್ನರಾಯಸ್ವಾಮಿ ದೇವಸ್ಥಾನ, ಹುಸ್ಕೂರು ಗ್ರಾಮ, ಆನೇಕಲ್ ತಾಲ್ಲೂಕು	3.00
19	ಶ್ರೀ ಕೋಟೆ ಲಕ್ಷ್ಮೀನಾರಾಯಣಸ್ವಾಮಿ ದೇವಸ್ಥಾನ, ಬಿದರ ಗುಪ್ಪೆ, ಆನೇಕಲ್ ತಾಲ್ಲೂಕು	2.00
20	ಶ್ರೀ ರಾಮೇಶ್ವರಸ್ವಾಮಿ ದೇವಾಲಯದ ಛತ್ರ, ಚಾಮರಾಜಪೇಟೆ, ಬೆಂಗಳೂರು	10.00
21	ಶ್ರೀ ರಾಯ ರಾಯ ಕೊಲ್ಲಂ ಛತ್ರ, ಚಾಮರಾಜಪೇಟೆ, ಬೆಂಗಳೂರು	15.00
		359.00
	ಒಟ್ಟಾರೆ	**374.00**

ಅನುಬಂಧ–II

2011–12ನೇ ಸಾಲಿನಲ್ಲಿ ರಾಜ್ಯದ ಧಾರ್ಮಿಕ ಸಂಸ್ಥೆಗಳಿಗೆ ದುರಸ್ತಿ/ಜೀರ್ಣೋದ್ಧಾರ/ನವೀಕರಣಗಳ ಉದ್ದೇಶಕ್ಕಾಗಿ ಸರ್ಕಾರದಿಂದ ಬಿಡುಗಡೆ ಮಾಡಿದ ಅನುದಾನದ ಜಿಲ್ಲಾವಾರು ವಿವರ:–

ಕ್ರ. ಸಂ.	*ಜಿಲ್ಲೆ*	*ಸಂಸ್ಥೆಯ ಸಂಖ್ಯೆ*	*ಮೊತ್ತ ರೂ. ಲಕ್ಷಗಳಲ್ಲಿ*
1	ಬೆಂಗಳೂರು ನಗರ	24	337.40
2	ಬೆಂಗಳೂರು ಗ್ರಾಮಾಂತರ	14	43.00
3	ಬೆಳಗಾವಿ	39	175.80
4	ಬಳ್ಳಾರಿ	14	38.40
5	ಬೀದರ್	17	67.40
6	ಬಿಜಾಪುರ	40	127.00
7	ಬಾಗಲಕೋಟೆ	42	85.80
8	ಚಿತ್ರದುರ್ಗ	36	171.40
9	ಚಿಕ್ಕಮಗಳೂರು	40	1290.00
10	ಚಿಕ್ಕಬಳ್ಳಾಪುರ	34	71.20
11	ಚಾಮರಾಜನಗರ	17	126.60
12	ದಕ್ಷಿಣ ಕನ್ನಡ	54	1045.5
13	ದಾವಣಗೆರೆ	48	368.00
14	ಧಾರವಾಡ	15	376.00
15	ಗುಲ್ಬರ್ಗಾ	50	92.80
16	ಗದಗ	43	83.40
17	ಹಾಸನ	68	290.40
18	ಹಾವೇರಿ	53	543.60
19	ಕೋಲಾರ	10	44.60
20	ಕೊಪ್ಪಳ	51	97.00
21	ಕೊಡಗು	12	88.80
22	ಮೈಸೂರು	39	489.20
23	ಮಂಡ್ಯ	67	254.20
24	ರಾಯಚೂರು	10	135.80
25	ರಾಮನಗರ	15	27.80
26	ಶಿವಮೊಗ್ಗ	82	1598.30
27	ತುಮಕೂರು	116	839.86
28	ಉಡುಪಿ	34	142.50
29	ಉತ್ತರ ಕನ್ನಡ	27	62.00
30	ಯಾದಗಿರಿ	21	354.60
31	ಹೊಸ ರಾಜ್ಯ	5	550.00
	ಒಟ್ಟು	**1137**	**10018.36**